**ಸಾಕ್ಷಿಯನ್ನು ದಿಃ 04.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 12 ಎಂದು,

ಒಟ್ಟು 4 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 13 ಎಂದು,

ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ.14 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಅರ್ಜಿದಾರರು ಮಹದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಮ್ಮಲ್ಲಿ ದಾಖಲೆ ಇಲ್ಲ. ಅಪಘಾತದ ದಿನವೇ ನಮ್ಮ ಆಸ್ಪತ್ರೆಗೆ ಬಂದಿದ್ದಾರೆ. ನಾನು ರೇಡಿಯಸ್ ಬೋನ್ ಗೆ ಚಿಕಿತ್ಸೆ ನೀಡಿದ್ದೇನೆ. ದಿಃ 02.02.2024 ರ ನಂತರ ದಿಃ 08.12.2025 ರ ನಡುವೆ ಅರ್ಜಿದಾರರನ್ನು ಪರೀಕ್ಷಿಸಿದ ಬಗ್ಗೆ ನನ್ನಲ್ಲಿ ದಾಖಲೆ ಇಲ್ಲ, ಗಾಯಾಳು ಬಳಿ ಇದೆ. ಅಪಘಾತದ ಹಿನ್ನಲೆಯನ್ನು ಕೇಸ್ ಶೀಟ್ ನಲ್ಲಿ ನಮೂದಾದ ಆಧಾರದ ಮೇಲೆ ನನ್ನ ಪ್ರಮಾಣ ಪತ್ರದಲ್ಲಿ ಬರೆದಿದ್ದೇನೆ. ಕೇಸ್ ಶೀಟ್ ಗಳಲ್ಲಿ ಗಾಯಾಳು ಟ್ರಾಕ್ಟರ್ ಅನ್ನು ಚಲಾಯಿಸುತ್ತಿದ್ದ ಎಂದು ನಮೂದಾಗಿದೆ ಎಂದರೆ ಸರಿ. ದಿಃ 08.12.2025 ರಂದು ಅರ್ಜಿದಾರರನ್ನು ಪರೀಕ್ಷಿಸಿದ ಆಧಾರದ ಮೇಲೆ ನಾನು ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಈ ದಿನ ಸಾಕ್ಷಿ ಹೇಳಬೇಕಿರುವ ವಿಚಾರ ಆ ದಿನ ಗೊತ್ತಿದ್ದ ಕಾರಣ ಅದಕ್ಕೆ ಅನುಕೂಲವಾಗುವಂತೆ ಅಂಕಿ ಅಂಶಗಳನ್ನು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 08.12.2025 ರಲ್ಲಿ ಓ.ಪಿ.ಡಿ ದಾಖಲೆಯಲ್ಲಿ ಅರ್ಜಿದಾರರ ಉದ್ಯೋಗದ ಬಗ್ಗೆ ಏನು ನಮೂದಿಸಿಲ್ಲ ಎಂದರೆ ಸರಿ. ಆ ದಿನದ ದಾಖಲೆಯಲ್ಲಿ ನಾನು ರೇಂಜ್ ಆಫ್ ಮೂಮೆಂಟ್

ಬಗ್ಗೆ ಏನನ್ನು ನಮೂದಿಸಿಲ್ಲ ಎಂದರೆ ಸರಿ. ರೇಂಜ್ ಆಫ್ ಮೂಮೆಂಟ್ ಏನು ಇರಲಿಲ್ಲ ಎನ್ನುತ್ತಾರೆ. ಕೇವಲ ರಿಸ್ಟ್ ಗೆ ಸಂಬಂಧಿಸಿದಂತೆ ನ್ಯೂನತೆ ಲೆಕ್ಕಾಚಾರ ಮಾಡಲು ಗೈಡ್ ಲೈನ್ಸ್ ನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ಇಲ್ಲ ಎನ್ನುತ್ತಾರೆ. ಆದ ಕಾರಣ ಬಲ ಕೈಯನ್ನು ಪೂರ್ತಿಯಾಗಿ ಪರಿಗಣಿಸಿ ನೀಡಿರುತ್ತೇನೆ. ಆ ರೀತಿಯ ಲೆಕ್ಕಚಾರ ನನ್ನ ಓ.ಪಿ.ಡಿ ದಾಖಲೆಯಲ್ಲಿ ಅಥವಾ ಪ್ರಮಾಣ ಪತ್ರದಲ್ಲಿ ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಉತ್ಪ್ರೇಕ್ಷೆಯಿಂದ ಶೇಕಡ 30 ನ್ಯೂನತೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ರಿಸ್ಟ್ ನಲ್ಲಿ ಮೂಮೆಂಟ್ ಇಲ್ಲದ ಕಾರಣ ಶೇಕಡ 30 ರಷ್ಟು ನೀಡಿದ್ದೇನೆ. ಗೈಡ್ ಲೈನ್ಸ್ ನಲ್ಲಿ ರೇಂಜ್ ಆಫ್ ಮೂಮೆಂಟ್ ಗೆ ಮಾತ್ರ ನ್ಯೂನತೆ ನಿರ್ಧರಿಸಲು ಯಾವುದೇ ಅವಕಾಶ ಇಲ್ಲ ಎಂದರೆ ಸರಿಯಲ್ಲ. ಆದ ಕಾರಣ ನಾನು ನ್ಯೂನತೆಯನ್ನು ನಿರ್ಧರಿಸಿರುವುದು ಗೈಡ್ ಲೈನ್ಸ್ ಪ್ರಕಾರ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಉತ್ಪ್ರೇಕ್ಷೆಯಿಂದ ನ್ಯೂನತೆ ನೀಡಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದ ಹೆಚ್ಚಿನ ಚಿಕಿತ್ಸೆಗೆ ರೂ. 60,000/- ಎಂದು ಉತ್ಪ್ರೇಕ್ಷೆಯಿಂದ ಹೇಳಿದ್ದು, ಅದಕ್ಕೆ ಪೂರಕ ದಾಖಲೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.